RNU AIR DHARWAD

# NOVEMBER 18, 2025
# AKASHAVANI - DHARWAD
# PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮರಗಳನ್ನೇ ಮಕ್ಕಳಂತೆ ಸಾಕಿ, ಸಲುಹಿದ, ವೃಕ್ಷಮಾತೆ, ಪದ್ಮಶ್ರೀ ಪುರಸ್ಕೃತೆ, ಸಾಲು ಮರದ ತಿಮ್ಮಕ್ಕ ಅವರ, ನೆನಪಿನಲ್ಲಿ, ಹುಬ್ಬಳ್ಳಿ ನ್ಯಾಯಾಲಯದ ಆವರಣದಲ್ಲಿ, ಹಿರಿಯ ದಿವಾಣಿ ನ್ಯಾಯಾಧೀಶ, ಕೆ.ಯಮನಪ್ಪ ಸಸಿ ನೆಟ್ಟು, ಶ್ರದ್ಧಾಂಜಲಿ ಸಲ್ಲಿಸಿದರು. ತಾಲೂಕು ಕಾನೂನು ಸೇವಾ ಸಮಿತಿ ಹಾಗೂ ಅರಣ್ಯ ಇಲಾಖೆ ಆಶ್ರಯದಲ್ಲಿ, 'ಏಕ್ ಪೇಡ್ ಮಾ ಕೆ ನಾಮ್' ಅಭಿಯಾನ ಜರುಗಿತು.

<><><>

ಮಕ್ಕಳ ಹಕ್ಕುಗಳ ರಕ್ಷಣೆಗಾಗಿ, ಮಕ್ಕಳ ಸಹಾಯವಾಣಿ ಸಂಖ್ಯೆ 1–0–9–8 ಹಾಗೂ ಪೊಲೀಸ್ ತುರ್ತು ಸಹಾಯವಾಣಿ ಸಂಖ್ಯೆ, 1–1–2 ಕಾರ್ಯನಿರ್ವಹಿಸುತ್ತಿವೆ ಎಂದು, ಯಾದಗಿರಿ, ಜಿಲ್ಲಾ ಪಂಚಾಯಿತಿ, ಸಿ.ಇ.ಓ. ಲವೀಶ್ ಒರಡಿಯಾ ತಿಳಿಸಿದ್ದಾರೆ. ಪದವಿ ಮಹಾವಿದ್ಯಾಲಯದ ಸಭಾಂಗಣದಲ್ಲಿ, ಮಕ್ಕಳ ಹಕ್ಕುಗಳ ಮಾಸಾಚರಣೆ ಹಾಗೂ ಅಂತಾರಾಷ್ಟ್ರೀಯ ದತ್ತು ಮಾಸಾಚರಣೆ ಕಾರ್ಯಕ್ರಮದಲ್ಲಿ, ಅವರು ಮಾತನಾಡಿದರು. ಬಾಲ ನ್ಯಾಯ ಕಾಯ್ದೆ 2015 ಹಾಗೂ ದತ್ತು ಅಧಿನಿಯಮ 2017 ರನ್ವಯ, ಮಕ್ಕಳ ರಕ್ಷಣಾ ಘಟಕಕ್ಕೆ ದೂರು ಸಲ್ಲಿಸುವಂತೆ ಅವರು, ಕೋರಿದರು.

<><><>

ಧಾರವಾಡ ಜಿಲ್ಲೆಯ, 136 ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಆಯೋಜಿಸಲಿರುವ, ಮಕ್ಕಳ ಗ್ರಾಮ ಸಭೆ ಕಾರ್ಯಕ್ರಮಕ್ಕೆ, ಧಾರವಾಡ ತಾಲೂಕಿನ ಮಾದನಭಾವಿ ಗ್ರಾಮ ಪಂಚಾಯಿತಿಯಲ್ಲಿ, ಮಕ್ಕಳ ಗ್ರಾಮ ಸಭೆ ಆಯೋಜಿಸುವ ಮೂಲಕ, ಜಿಲ್ಲಾಡಳಿತ ಹಾಗೂ ತಾಲೂಕು ಆಡಳಿತದ ಹಿರಿಯ ಅಧಿಕಾರಿಗಳೊಂದಿಗೆ, ಜಿಲ್ಲಾಧಿಕಾರಿ ದಿವ್ಯಾ ಪ್ರಭು ಈಗಷ್ಟೇ ಚಾಲನೆ ನೀಡಿದ್ದಾರೆ.

<><><>

'ಓದು ಕರ್ನಾಟಕ' ಕಾರ್ಯಕ್ರಮ, ರಾಜ್ಯದ 450 ಶಾಲೆಗಳಲ್ಲಿ, ಡಿಸೆಂಬರ್ 18ರಿಂದ ಜಾರಿಗೊಳ್ಳಲಿದೆ. ರಾಜ್ಯ ಗ್ರಂಥಾಲಯ ಸಂಘದ ಅಧ್ಯಕ್ಷ, ಶಿವಶಂಕರ ಕಾಡದೇವರಮಠ ತುಮಕೂರಿನಲ್ಲಿ ಮಾಹಿತಿ ನೀಡಿ, ಗ್ರಂಥಾಲಯ ಹಾಗೂ ಪುಸ್ತಕಗಳ ಬಗ್ಗೆ, ವಿದ್ಯಾರ್ಥಿಗಳಲ್ಲಿ ಅಭಿರುಚಿ ಮೂಡಿಸಲು, ಈ ಯೋಜನೆ ರೂಪಿಸಲಾಗಿದೆ ಎಂದರು.

<><><>

'ಆತ್ಮನಿರ್ಭರ ಭಾರತ ಸಾಧನೆಗೆ, ವಾಹಕಗಳಾಗಿ ಸಹಕಾರ ಸಂಘಗಳು' ಎಂಬ, ಧ್ಯೇಯದೊಂದಿಗೆ, 72ನೇ ಅಖಿಲ ಭಾರತ ಸಹಕಾರಿ ಸಪ್ತಾಹ ಆಯೋಜಿಸಲಾಗಿದೆ ಎಂದು, ಬಿ.ಡಿ.ಸಿ.ಸಿ. ಬ್ಯಾಂಕ್ ನಿರ್ದೇಶಕಿ ಹಾಗೂ ಹರಪನಹಳ್ಳಿ ಶಾಸಕಿ, ಎಂ.ಪಿ.ಲತಾ ಮಲ್ಲಿಕಾರ್ಜುನ ತಿಳಿಸಿದ್ದಾರೆ. ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲಾ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಒಕ್ಕೂಟ, ಹೊಸಪೇಟೆಯಲ್ಲಿ ಆಯೋಜಿಸಿದ್ದ, ಸಹಕಾರ ಸಪ್ತಾಹಕ್ಕೆ, ಚಾಲನೆ ನೀಡಿ, ಮಾತನಾಡಿದರು.

<><><>

ಇಂದಿನಿಂದ, ಮೂರು ದಿನಗಳ ಕಾಲ, ರಾಜ್ಯ ಮಾನವ ಹಕ್ಕು ಆಯೋಗ, ಶಿವಮೊಗ್ಗ ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿ, ಸಭೆ ನಡೆಸಿ, ಈಗಾಗಲೇ ದಾಖಲಾದ ಪ್ರಕರಣಗಳ ವಿಚಾರಣೆ ನಡೆಸಲಿದೆ ಎಂದು, ಆಯೋಗದ ಕಾರ್ಯದರ್ಶಿ, ದಿನೇಶ ಸಂಪತ ರಾಜ ತಿಳಿಸಿದ್ದಾರೆ.

<><><>

ರಾಜ್ಯದ ಕರಾವಳಿಯ, ಮೂರು ಜಿಲ್ಲೆಗಳ ಸಮಗ್ರ ಅಭಿವೃದ್ಧಿಗಾಗಿ, ಪ್ರಸಕ್ತ ಬಜೆಟ್‌ನಲ್ಲಿ, 10 ಕೋಟಿ 50 ಲಕ್ಷ ರೂಪಾಯಿ ಅನುದಾನ ಕಾಯ್ದಿರಿಸಲಾಗಿದೆ, ಎಂದು ಕರಾವಳಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ, ಎಂ.ಎ ಗಫೂರ್ ತಿಳಿಸಿದ್ದಾರೆ. ಉಡುಪಿ ಜಿಲ್ಲೆ, ಮಣಿಪಾಲ ರಜತಾದ್ರಿಯ, ಜಿಲ್ಲಾ ಪಂಚಾಯಿತಿ ಕಚೇರಿಯ, ಡಿ.ಎಸ್ ಆಚಾರ್ಯ ಸಭಾಂಗಣದಲ್ಲಿ, ಕರಾವಳಿ ಅಭಿವೃದ್ಧಿ ಮಂಡಳಿ, ಸರ್ವ ಸದಸ್ಯರ ಸಾಮಾನ್ಯ ಸಭೆಯ, ಅಧ್ಯಕ್ಷತೆ ವಹಿಸಿ ಮಾತನಾಡಿದರು.

<><><>

ಗದಗ ಜಿಲ್ಲೆ ಬಿಂಕದಕಟ್ಟಿ ಗ್ರಾಮದಲ್ಲಿ ಆಯೋಜಿತ, ಪಂಚ ಖಾತ್ರಿ ಯೋಜನೆಗಳ, ಪ್ರಚಾರ ಜಾಥಾಕ್ಕೆ, ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ ಪಾಟೀಲ ಚಾಲನೆ ನೀಡಿದರು.

<><><>

ಬೆಳಗಾವಿ ರೈಲು ನಿಲ್ದಾಣ, "ಪ್ರಧಾನಮಂತ್ರಿ ಅಮೃತ ಸ್ಟೇಶನ್ ಯೋಜನೆಯಡಿ" ಆಯ್ಕೆಯಾಗಿದ್ದು, ಕಾಮಗಾರಿಗಳ ವೇಗವರ್ಧಿಸಿ, ಕಾಲಮಿತಿಯಲ್ಲಿ ಪೂರ್ಣಗೊಳಿಸುವಂತೆ, ಬೆಳಗಾವಿ ಸಂಸದ ಜಗದೀಶ ಶೆಟ್ಟರ, ನೈಋತ್ಯ ರೇಲ್ವೆ ವಲಯದ, ಹಿರಿಯ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ನೈಋತ್ಯ ರೇಲ್ವೆ ಮಹಾ ಪ್ರಬಂಧಕ ಮುಕುಲ್ ಸರನ ಮಾಥುರ ಪಾಲ್ಗೊಡಿದ್ದರು.

<><><>

ಬೆಂಗಳೂರಿನ, ಬಸವನಗುಡಿ ಕಡಲೆಕಾಯಿ ಪರಿ ೆಗೆ, ಮೈಸೂರು ದಸರಾ ಮಾದರಿಯ ದೀಪಾಲಂಕಾರದ ಮೆರುಗು! ಇದೇ ಮೊದಲ ಬಾರಿಗೆ, ವಿಶ್ವ ವಿಖ್ಯಾತ ಮೈಸೂರು ದಸರಾದಂತೆ, ದೊಡ್ಡ ಗಣಪತಿ ದೇವಸ್ಥಾನ ಹಾಗೂ ಸುತ್ತಮುತ್ತಲಿನ ಪ್ರದೇಶಗಳಿಗೆ, ವಿದ್ಯುದ್ದೀಪಾಲಂಕಾರ ಮಾಡಲಾಗಿದೆ. ಬಗೆಬಗೆಯ ಕಡಲೆಕಾಯಿ ಸವಿಯುವ ಜೊತೆಗೆ, ದೀಪಾಲಂಕಾರದ ಸೊಬಗನ್ನು ಕಣ್ತುಂಬಿಕೊಳ್ಳಲು ತಪ್ಪದೇ ಪರಿ ೆಗೆ ಭೇಟಿ ನೀಡಿ ಎಂದು, ಮುಜರಾಯಿ ಖಾತೆ ಸಚಿವ ರಾಮಲಿಂಗಾರೆಡ್ಡಿ, ಕೋರಿದ್ದಾರೆ.

<><><>

ದಾವಣಗೆರೆ ತಾಲೂಕು, ಮಾಯಕೊಂಡ ಗ್ರಾಮದ, 300 ಎಕರೆ ವಿಸ್ತೀರ್ಣ ಹೊಂದಿದ, ಬ್ರಿಟಿ ೆರ ಆಳ್ವಿಕೆ ಕಾಲದ, ಕೆಂಚಮಾರನಹಳ್ಳಿ ಕೆರೆ, ಹೂಳೆತ್ತಿ ಪುನರುಜ್ಜೀವಿತಗೊಳಿಸಲು ಉದ್ದೇಶಿಸಲಾಗಿದೆ ಎಂದು, ಶಾಸಕ ಕೆ.ಎಸ್.ಬಸವಂತಪ್ಪ ತಿಳಿಸಿದ್ದಾರೆ. ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ, ಜಿಲ್ಲಾ ಪಂಚಾಯಿತಿ ಸಿ.ಇ.ಓ. ಗಿತ್ತೆ ಮಾಧವ ವಿಠ್ಠಲ ರಾವ್, ಜೊತೆ ಕೆರೆಗೆ ತೆರಳಿ, ಪರಿಶೀಲಿಸಿದರು.

<><><>

ಕೊಪ್ಪಳ ಸಮೀಪ, ಖಾಸಗಿ ಕಾರ್ಖಾನೆ ವಿಸ್ತರಣೆ ವಿರೋಧಿಸಿ, ನಡೆಯುತ್ತಿರುವ ಧರಣಿ ಸತ್ಯಗ್ರಹ, 18 ನೇ ದಿನಕ್ಕೆ ಕಾಲಿರಿಸಿದೆ. ಗದುಗಿನ ತೋಂಟದ ಶ್ರೀ ಸಿದ್ಧರಾಮ ಶಿವಾಚಾರ್ಯ ಸ್ವಾಮೀಜಿ, ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ಧರಣಿಯಲ್ಲಿ ಪಾಲ್ಗೊಂಡು, ಮುಖ್ಯಮಂತ್ರಿಯವರ ಗಮನಕ್ಕೆ ತಂದು, ಸೂಕ್ತ ನಿರ್ಣಯ ಕೈಗೊಳ್ಳುವುದಾಗಿ ತಿಳಿಸಿದರು.

<><><>

ಹುಬ್ಬಳ್ಳಿಯ ರಾಜನಗರದ, ಕೆ.ಎಸ್.ಸಿ.ಎ. ಕ್ರೀಡಾಂಗಣದಲ್ಲಿ, ಎಲೈಟ್ 'ಬಿ' ಗುಂಪಿನ, ಕರ್ನಾಟಕ ಹಾಗೂ ಚಂಡೀಘಡ ತಂಡಗಳ ಮಧ್ಯದ ರಣಜಿ ಟ್ರೋಫಿ ಪಂದ್ಯಾವಳಿಯ, ಮೂರನೇ ದಿನವಾದ ಇಂದು, ಇತ್ತೀಚೆಗೆ ಬಂದ ವರದಿ ಪ್ರಕಾರ, 50 ಓವರ್‌ಗಳಲ್ಲಿ, 6 ವಿಕೆಟ್‌ಗಳ ನಷ್ಟಕ್ಕೆ 168 ರನ್ ಗಳಿಸಿ, ಚಂಡೀಘಡ ತಂಡ, 379 ರನ್‌ಗಳ ಗುರಿ ಬೆನ್ನಟ್ಟಿದೆ.

<><><>

ರಾಜ್ಯದ ಉತ್ತರ ಒಳನಾಡಿನ 6 ಜಿಲ್ಲೆಗಳಲ್ಲಿ, ಮುಂಬರುವ ನಾಲ್ಕೈದು ದಿನ, ಶೀತಗಾಳಿ ಬೀಸುವ ಸಾಧ್ಯತೆಯಿದೆ ಎಂದು, ಭಾರತೀಯ ಹವಾಮಾನ ಇಲಾಖೆಯ, ಬೆಂಗಳೂರು ಕೇಂದ್ರದ ನಿರ್ದೇಶಕ, ಸಿ.ಎಸ್. ಪಾಟೀಲ ತಿಳಿಸಿದ್ದಾರೆ. ರಾಜ್ಯದಲ್ಲಿ, ಒಣ

ಹವೆ ಮುಂದುವರಿಯಲಿದ್ದು, ಬೆಳಗ್ಗೆ ಚಳಿ ಹಾಗೂ ಅಲ್ಲಲ್ಲಿ ಮಂಜಿನ ವಾತಾವರಣ ಕಂಡುಬರಲಿದೆ. ಇಂದಿನಿಂದ ದಕ್ಷಿಣ ಒಳನಾಡು, ಮಲೆನಾಡು ಹಾಗೂ ಕರಾವಳಿ ಜಿಲ್ಲೆಗಳಲ್ಲಿ, ಅಲ್ಲಲ್ಲಿ ಚದುರಿದಂತೆ ಹಗುರದಿಂದ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು, ಹವಾಮಾನ ಇಲಾಖೆ ತಿಳಿಸಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.